# ಇಂಟರ್‌ನೆಟ್‌ನಲ್ಲಿ ಅಪರೂಪದ ಪುಕ್ಕಟೆ ಮಾಹಿತಿ ಸೇವೆ *

ಎಂ. ಎಸ್. ಶ್ರೀಧರ್

**ಸಾರಾಂಶ:** ಇಂಟರ್‌ನೆಟ್‌ನಲ್ಲಿ ಮನರಂಜನೆಯ ಜೊತೆಗೆ ಮಾಹಿತಿ ಸೇವೆಗಳು ದೊರೆಯುತ್ತವೆ. ಅವುಗಳನ್ನು ಬಳಸಲು ಬೇಕಾಗುವ ನೈಪ್ಯಣ್ಯತೆಯನ್ನು ಪ್ರಸ್ತಾಪಿಸುತ್ತಾ ವಿದೇಶಗಳಲ್ಲಿ ಲಭ್ಯವಿರುವ ಆನ್ ಲೈನ್ ಪರಾಮರ್ಶನ ಸೇವೆಗಳ ಬಗ್ಗೆ ಲೇಖನ ಮಾಹಿತಿ ನೀಡುತ್ತದೆ. Ask a librarian ನಂತಹ ಸೇವೆಗಳು ಪಶ್ಚಿಮದ ಬಹುತೇಕ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಲಭ್ಯವಿದೆ. ಲೈಬ್ರರಿ ಆಫ್ಹ್ ಕಾಂಗ್ರೆಸ್ ಕೂಡ ಪ್ರಪಂಚದಾದ್ಯಂತ ಗ್ರಂಥಪಾಲಕರ ದೊಡ್ಡ ಜಾಲವೊಂದನ್ನು ನಿರ್ಮಿಸಿ ಈ ನಿಟ್ಟಿನಲ್ಲಿ ಕಾರ್ಯನಿರತವಾಗಿದೆ. ನಮ್ಮ ಗ್ರಂಥಾಲಯಗಳು ಇಂತಹ ಪ್ರಶ್ನೆಗಳಿಗೆ ಗಾಭರಿ ಮಿಶ್ರಿತ ತೇಲಿಸುವ ಉತ್ತರವನ್ನೇ ನೀಡುತ್ತವೆ. ಭಾರತದಲ್ಲಿಯೂ ಇಂತಹ ಪುಕ್ಕಟೆ ಆನ್‌ಲೈನ್ ಪರಾಮರ್ಶನ ಗ್ರಂಥಗಳಿಂದ ಸೇವೆ ದೊರಕಿಸಿ ಅವುಗಳ ಮುದ್ರಿತ ಪ್ರತಿ ಖರೀದಿಗೆ ತಗುಲುವ ದುಬಾರಿ ವೆಚ್ಚ ಉಳಿಸಬಹುದು ಮತ್ತು ಹೆಚ್ಚು ಜನರನ್ನು ತಲುಪಬಹುದು. ಪುಕ್ಕಟೆ ಲಭ್ಯವಿರುವ ಬ್ರಿಟಾನಿಕಾ ವಿಶ್ವಕೋಶ, ನಿಘಂಟು, ಪದಕೋಶ ಇತ್ಯಾದಿಗಳನ್ನು ಆನ್‌ಲೈನ್ ರೂಪದಲ್ಲಿ ನೀಡಬಹುದು. ಇಂಟರ್‌ನೆಟ್ ಅಷ್ಟೇನೂ ದುಬಾರಿಯೆಂದೆನಿಸದ ಇಂದು ಕನ್ನಡ ವಿಕಿಪೀಡಿಯಾ ಬಳಸಿ "ಗ್ರಂಥಪಾಲಕರೊಬ್ಬರನ್ನು ಕೇಳಿ" ಸೇವೆಗಳನ್ನು ಪ್ರಾರಂಭಿಸಬಹುದು. ಈ ವಿಚಾರಗಳಲ್ಲಿ ತಾಂತ್ರಿಕ ನೈಪ್ಯಣ್ಯತೆಯ ಹೊರತಾಗಿಯೂ ನಾವು ಪರಾವಲಂಬಿಗಳಾಗಿರುವುದು ವಿಷಾದನೀಯ.

**ಸೂಚಿಪದಗಳು:** ಇಂಟರ್‌ನೆಟ್; ಸಾರ್ವಜನಿಕ ಗ್ರಂಥಾಲಯಗಳು; ಆನ್‌ಲೈನ್ ಸೇವೆ; ಪರಾಮರ್ಶನ ಸೇವೆ

ನಿರ್ಧಿಷ್ಟ ಮಾಹಿತಿಗಾಗಿ ಗ್ರಂಥಾಲಯಗಳಲ್ಲಿ, ಪರಾಮರ್ಶನ ಗ್ರಂಥಗಳಲ್ಲಿ, ಇಂಟರ್‌ನೆಟ್‌ನಲ್ಲಿ ಹುಡುಕಿ, ವಿಚಾರ ವಿನಿಮಯ ವೇದಿಕೆ/ಚರ್ಚಾ ಗುಂಪುಗಳಲ್ಲಿ ಅಭಿಪ್ರಾಯ ಸಂಗ್ರಹಿಸಿದರೂ ಮಾಹಿತಿ ದೊರೆಯದಿದ್ದರೆ ಅಥವ ಖಚಿತವೆನಿಸದಿದ್ದರೆ ಕರಾರುವಕ್ಕಾದ ಮಾಹಿತಿಯನ್ನು ಕುಳಿತಲ್ಲೆ ಪುಕ್ಕಟೆಯಾಗಿ ಪಡೆಯುವ ಮಾರ್ಗವೊಂದಿದೆ. e-mail, ಹರಟೆ (chat), ಸಂಗೀತ, ಆಟಗಳು (games), ಇತ್ಯಾದಿಗಳಿಗೆ ಇಂಟರ್‌ನೆಟ್‌ನಲ್ಲಿ ಅಪಾರ ಕಾಲ ವ್ಯಯವಾಗುತ್ತಿರುವಾಗ ಇಂತಹ ಅಪರೂಪದ online ಮಾಹಿತಿ ಸೇವೆ ಬಳಸುವವರು ವಿರಳ. Games, chat, ಇತ್ಯಾದಿ ಮನರಂಜನೆ ಹೋರತುಪಡಿಸಿದ ಕಂಪ್ಯೂಟರ್ ಮತ್ತು ಇಂಟರ್‌ನೆಟ್ ಬಳಕೆ, ಕುಳಿತು remoteನ ಗುಂಡಿ ಒತ್ತಿ ಬಳಸುವ ಟಿವಿ ಯಷ್ಟು ಸುಲಭವಲ್ಲ ಮತ್ತು ಟಿವಿಯಂತೆ ಅವು ವೀಕ್ಷಕರನ್ನು ಸುಲಭವಾಗಿ ತನ್ನತ್ತ ಸೆಳೆದು, ಸೆರೆಹಿಡಿದು ತನ್ನ ಮನರಂಜನಾ ಜಾಲದಲ್ಲಿ ಬಂಧಿಸಿ 'ವ್ಯಸನಿ'ಗಳನ್ನಾಗಿಸಲಾರವು. ಇಂಟರ್‌ನೆಟ್‌ನ ಮನರಂಜನಾ ಉಪಯೋಗಗಳಿಗೆ ಈ ಗುಣ ಸ್ವಲ್ಪ ಮಟ್ಟಿಗೆ ಇದೆಯಾದರೂ ಮಾಹಿತಿ ಸಂಗ್ರಹಣೆಯಂತಹ ಇತರ ಹಲವಾರು ಸದ್ಬಳಕೆಗಳಿಗೆ ಕೊಂಚ ಗ್ರಾಹಕ ನೈಪುಣ್ಯತೆ ಅವಶ್ಯಕ. ಇದರಿಂದಾಗಿಯೆ ಪೂರ್ವಬಾವಿ ಖನಿಷ್ಟ ನೈಪುಣ್ಯತೆಯಿಂದ ಮಾತ್ರವೆ ಆಸ್ವಾದಿಸಬಹುದಾದ ಒಳ್ಳೆಯ ಕಲೆ, ಸಾಹಿತ್ಯದಂತೆ ಇಂಟರ್‌ನೆಟ್‌ನ ಹಲವಾರು ಸದ್ಬಳಕೆಗೆ ಸ್ವಲ್ಪ ನೈಪುಣ್ಯತೆ ಬೇಕು.

ಇತ್ತೀಚೆಗೆ 'ಇಂಟರ್‌ನೆಟ್‌ನಲ್ಲಿ ಕನ್ನಡ ಪುಸ್ತಕಗಳ ಮಾಹಿತಿ' ಎಂಬ ಲೇಖನ ಸಿದ್ದ ಪಡಿಸುವಾಗ ನಮ್ಮ ಸಾರ್ವಜನಿಕ ಗ್ರಂಥಾಲಯಗಳು ತಮ್ಮ ಇಂಟರ್‌ನೆಟ್ ತಾಣದಲ್ಲಿ ದೊರೆಕಿಸಿಕೊಡದ ಅಂಕಿಅಂಶಗಳನ್ನು ಸಮೀಪದ ಗ್ರಂಥಾಲಯಕ್ಕೆ ಫೋನ್ ಮಾಡಿ 'ನಿಮ್ಮಲ್ಲಿ ಎಷ್ಟು ಕನ್ನಡ ಪುಸ್ತಕಗಳಿವೆ' ಎಂದು ಕೇಳಿದರೆ ಸ್ವಲ್ಪ ಗಾಬರಿಯಾದ ಸಿಬ್ಬಂದಿ ನೀವು ಯಾರು, ಈ ಮಾಹಿತಿ ನಿಮಗೇಕೆ, ಲಿಖಿತ ಮೂಲಕ ಕೇಳಿ, ಸರಿಯಾಗಿ ತಿಳಿಯದು, ಇತ್ಯಾದಿ, ಆದ ಮೇಲೆ 75,000 ಅಥವ ಒಂದು ಲಕ್ಷ ಎಂದು ಇಟ್ಟು ಕೊಳ್ಳಿ ಎಂದರು. ಹಾಗಾದರೆ ಕನ್ನಡದಲ್ಲಿ ಪ್ರಕಟವಾಗಿರುವ ಒಟ್ಟು ಶೀರ್ಷಿಕೆಗಳೆಷ್ಟು ಎಂದರೆ ನಿರುತ್ತರರಾದರು. ಮಾಹಿತಿ ಹಕ್ಕು ಕಾಯಿದೆ ಜಾರಿಯಲ್ಲಿರುವ ಸಮಾಜದಲ್ಲಿ ಕೊಟ್ಟ ಮಾಹಿತಿ ಪ್ರಕಟಣೆಯಿಂದ ಎಲ್ಲಿ ಕಿರಿಕಿರಿ/ತೊಂದರೆಯಾಗುವದೊ ಎಂಬ ಭಯದಿಂದ ಹೀಗೆ ಮಾಹಿತಿ ಕೊಡದೆ, ತೇಲಿಸಿ ಉತ್ತರ ಕೊಟ್ಟು ಜಾರಿ ಕೊಳ್ಳುವ ಪ್ರಸಂಗಗಳಿವೆ. ಮೇಲೆ ತಿಳಿಸಿದ ಲೇಖನದ ಸವಿವರವಾದ ಅಂಕಿಅಂಶಗಳನ್ನು (ಪಟ್ಟಿ ನೋಡಿ) ಗಮನಿಸಿದವರೊಬ್ಬರು ಇಷ್ಟು ನಿಖರ ಮಾಹಿತಿ ಎಲ್ಲಿ ದೊರೆಯುತ್ತದೆ ಎಂದು ಆಶ್ಚರ್ಯ ವ್ಯಕ್ತಪಡಿಸಿದರು. ಸಾಮಾನ್ಯವಾಗಿ ನಮ್ಮ ಆಸಕ್ತ ವಿಷಯಕ್ಕೆ ಸಂಬಂಧಿಸಿದ ಲೇಖನ ಮತ್ತು ಪುಸ್ತಕಗಳಿಂದ ಮಾಡಿದ ಟಿಪ್ಪಣಿ, ಅಂಕಿ ಅಂಶಗಳನ್ನು ಕಂಪ್ಯೂಟರ್‌ಗೆ ಉಣಿಸಿದ್ದರೆ, ಅದನ್ನು ಯಾವಾಗ ಬೇಕಾದರೂ ಒಂದು desktop ಶೋಧ ಯಂತ್ರದ (ಇದರ ಬಗ್ಗೆ ಮುಂದೆ ತಿಳಿಯೋಣ) ಸಹಾಯದಿಂದ ಕೂಡಲೆ ತೆಗೆಯಬಹುದು. ನಂತರ ಇಂಟರ್‌ನೆಟ್ ಹುಡುಕಾಟ, ಸಂಬಂದಪಟ್ಟ ತಾಣಗಳಿಗೆ ಭೇಟಿ, ಇತ್ಯಾದಿ ಆದ ಮೇಲೆ ಉಳಿದಿರುವ gap ತುಂಬಲು ಬಳಸಬಹುದಾದ ಇಂಟರ್‌ನೆಟ್ ಸೇವೆಯೆ 'Ask a Librarian' (ಗ್ರಂಥಪಾಲಕೊರಬ್ಬರನ್ನು ಕೇಳಿ). ಹೀಗೆ ಲೈಬ್ರರಿ ಆಫ್ ಕಾಂಗ್ರೆಸ್ ಮತ್ತು ಬ್ರಿಟಿಷ್ ಗ್ರಂಥಾಲಯಗಳಲ್ಲಿ ಕನ್ನಡ ಪುಸ್ತಕಗಳೆಷ್ಟಿವೆ ಎಂದು ಕೇಳಿದಾಗ ಮರುದಿನ ಲೇಖಕರ e-mail

| | ಲೈಬ್ರರಿ ಆಫ್ ಕಾಂಗ್ರೆಸ್ (USA) | ಬ್ರಿಟೀಷ್ ಗ್ರಂಥಾಲಯ (UK) | ರಾಷ್ಟ್ರೀಯ ಗಂಥಾಲಯ (ಕಲ್ಕತ್ತ) | ದೆಹಲಿ ಸಾರ್ವಜನಿಕ ಗ್ರಂಥಾಲಯ |
|---|---|---|---|---|
| ಕನ್ನಡ | 9,305 | 20,000 | 32,000 | 3,550 |
| ತಮಿಳು | 18,234 | 45,000 | 57,000 | 22,401 |
| ಹಿಂದಿ | 36,424 | 63,000 | 80,000 | 897,826 |

ನಲ್ಲಿ ಸ್ಪಷ್ಟ ಉತ್ತರ ಅಂಕಿ ಅಂಶದೊಂದಿಗೆ ಕಾದಿತ್ತು. ಇಂತಹ ಸೇವೆಯಲ್ಲಿ ನಿರತವಾಗಿರುವ ನೂರಾರು ಗ್ರಂಥಾಲಯಗಳ ಇಂಟರ್‌ನೆಟ್ ತಾಣಗಳಲ್ಲಿ ಪ್ರಥಮ ಸ್ಥಾನ ಗಳಿಸಿರುವ ಹಾಗೂ ಜನಪ್ರಿಯವಾದ ಆಯ್ದ ಕೆಲವು ತಾಣಗಳನ್ನು ಅವುಗಳ URL ವಿಳಾಸಗಳೊಂದಿಗೆ ಪಟ್ಟಿಯಲ್ಲಿ ಕೊಡಲಾಗಿದೆ. ಪ್ರಶ್ನೆ ಕೇಳಿ ನೀವೆ ಪರೀಕ್ಷೆ ಮಾಡಿ.

ಪಶ್ಚಿಮದ ಬಹುತೇಕ ಎಲ್ಲ ಸಾರ್ವಜನಿಕ ಗ್ರಂಥಾಲಯಗಳೂ ಈ ಸೇವೆ ನೀಡುತ್ತಲಿವೆ. UKಯ ಸಾರ್ವಜನಿಕ ಗ್ರಂಥಾಲಯಗಳೆಲ್ಲವೂ ಒಟ್ಟಿಗೆ ಸೇರಿ ನಡೆಸುವ ಸೇವೆ 24 ಘಂಟೆ, 365 ದಿವಸ ಲಭ್ಯವಿದೆ. ಯಾವುದೇ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ಶಾಲಾ ವಿದ್ಯಾರ್ಥಿಯಿಂದ ಸಂಶೋಧಕರವರೆಗೆ ಯಾರು ಬೇಕಾದರೂ ಕೇಳಬಹುದು. ಈ ಸೇವೆ ಬಳಸಲು ಅನುಕೂಲವಾಗಲೆಂದೇ ಕೈಪಿಡಿಯೊಂದನ್ನು ತಮ್ಮ ತಾಣದಲ್ಲಿ PDF ರೂಪದಲ್ಲಿ ಇಟ್ಟಿದ್ದಾರೆ. ನಮ್ಮ e-mail ವಿಳಾಸ ತಪ್ಪಿದ್ದು ಉತ್ತರ bounce ಆಗಿದ್ದರೆ 'bouncing Answers' ಎಂಬ ವೆಬ್‌ಪುಟದಲ್ಲಿ ನೋಡಿದರೆ ಅಂತಹ ಬಾರದ ಉತ್ತರಗಳು ಸಿಗುತ್ತವೆ. 'ಇದು ಮೂಲತ: UK ನಿವಾಸಿಗಳಿಗಾಗಿದ್ದರೂ ಇತರ ದೇಶದವರ ಪ್ರಶ್ನೆಗಳನ್ನು ತಿರಸ್ಕರಿಸುವುದಿಲ್ಲ' ಎಂಬ ಅವರ ಔದಾರ್ಯ ಯಾರನ್ನೂ ನಾಚಿಸುವಂತದ್ದು. ಇಂತಹ ಸೇವೆಯನ್ನು ಪರಿಣಾಮಕಾರಿಗೊಳಿಸುವ ನಿಟ್ಟಿನಲ್ಲಿ ಕೆಲವು ನಿಬಂದನೆಗಳು ಅನಿವಾರ್ಯ. ಉದಾಹರಣೆಗೆ ಬ್ರಿಟಿಷ್ ಸಾರ್ವಜನಿಕ ಗ್ರಂಥಾಲಯಗಳು ಪ್ರಶ್ನೆ ಊಹಾಪೂರಿತ(hypothetical) ಆಗಿರದೆ ವಾಸ್ತವ(factual) ಆಗಿರಬೇಕು ಮತ್ತು ಧಾಖಲೆಯಾದ (documented) ಉತ್ತರ ದೊರೆಯುವಂತದ್ದಾಗಿರಬೇಕು ಎಂದು ಬಯಸುತ್ತವೆ. ಅಲ್ಲದೆ ಪ್ರಶ್ನೆಯ ಸಂದರ್ಭ ಮತ್ತು ಹಿನ್ನಲೆ ತಿಳಿಸಬೇಕು ಮತ್ತು ದಿನಕ್ಕೆ ಒಬ್ಬರಿಗೆ ಮೂರು ಪ್ರಶ್ನೆಗಳಿಗಿಂತ ಹೆಚ್ಚು ಕೇಳಲು ಅವಕಾಶವಿಲ್ಲ. ಮಾಹಿತಿ ತಂತ್ರಜ್ಞಾನದ ವಿಶಿಷ್ಟ ಪ್ರಶ್ನೆಗಳು, trivia ಮತ್ತು quiz ಮಾದರಿ ಪ್ರಶ್ನೆಗಳು, literature search, ಪ್ರಬಂಧ ಮತ್ತು ಪ್ರಶ್ನೆ ಪತ್ರಿಕೆಗಳ ಪ್ರಶ್ನೆಗಳನ್ನು ನಿಷೇಧಿಸಿದೆ. ನ್ಯಾಯಾಂಗಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ಸಾರ್ವಜನಿಕ ನ್ಯಾಯಾಂಗ ಸೇವೆಯ 'Just Ask' ಗೆ ಕಳಿಸುವಂತೆ ಸಲಹೆ ನೀಡುತ್ತದೆ. ಲೈಬ್ರರಿ ಆಫ್ ಕಾಂಗ್ರೆಸ್ (ಗ್ರಂಥಾಲಯ) ಈ ಸೇವೆಗಾಗಿಯೆ ಪ್ರಪಂಚದಾದ್ಯಂತ ಗ್ರಂಥಪಾಲಕರ ಒಂದು ದೊಡ್ಡ ಜಾಲವನ್ನು ನಿರ್ಮಿಸಿದೆ. ಇಲ್ಲಿ ನಮ್ಮ ಪ್ರಶ್ನೆಯನ್ನು ವರ್ಗೀಕರಣದ ಪಟ್ಟಿಯಲ್ಲಿ ಯಾವ ಕ್ಷೇತ್ರಕ್ಕೆ ಸಂಬಂದಿಸಿದ್ದು ಎಂದು ತಿಳಿಸಬೇಕು. ಹೆಚ್ಚು ಸಂವಹನ ವೇಗ (0.9 ಸೆಕೆಂಡುಗಳು), ಇತರ 8938 ತಾಣಗಳಿಂದ ಸಂಪರ್ಕ ಮತ್ತು ಇಂಟರ್‌ನೆಟ್ ತಾಣಗಳ ಪೈಕಿ 1523ನೇ ರ್‍ಯಾಂಕ್ ಹೊಂದಿರುವುದು ಈ ತಾಣದ ವಿಶೇಷ. ಕ್ಯಾಲಿಫೋರ್ನಿಯಾದ ಸುಮಾರು 130 ಗ್ರಂಥಾಲಯಗಳು ಒಟ್ಟಿಗೆ ಸೇರಿ ನೆಡೆಸುವ 'Ask Now' ಸೇವೆ ಪ್ರಶ್ನೆ ಕೇಳಿದವರಿಗೆ ಅಯಾ ಕ್ಷೇತ್ರದ ತಜ್ಞರೊಂದಿಗೆ ನೇರ ಸಂಪರ್ಕ ಕಲ್ಪಿಸುತ್ತದೆ. The National Science Digital Libraryಯ 'Ask SDL' ಪ್ರಶ್ನೆ ಕೇಳುವ ಮುನ್ನ ಈ ಡಿಜಿಟೆಲ್ ಗ್ರಂಥಾಲಯದ ಸಂಗ್ರಹವನ್ನು ಹುಡುಕಲು ಮತ್ತು ಈ ಹಿಂದಿನ ಪ್ರಶ್ನೋತ್ತರಗಳ archive ಪರಿಶೀಲಿಸಲು ಕೋರುತ್ತದೆ. ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಕೆಲವು tips ಕೊಟ್ಟು homework ಕೇಳಬಾರದೆಂದು ವಿನಂತಿಸುತ್ತದೆ. ಇದಲ್ಲದೆ ವಿದ್ಯಾರ್ಥಿಗಳಿಗೆ, ವಿಶೇಷವಾಗಿ ಪಿಯುಸಿ ವಿದ್ಯಾರ್ಥಿಗಳಿಗೆ ಅಮೇರಿಕಾ ಶಾಲಾ ಗ್ರಂಥಾಲಯಗಳ ಸಂಘದ Ask KC, ಇಂಟರೆನೆಟ್ ಸಾರ್ವಜನಿಕ ಗ್ರಂಥಾಲಯದ Ask Us ಉಪಯುಕ್ತ ತಾಣಗಳು.

| | | |
|---|---|---|
| 1 | *UK ಸಾರ್ವಜನಿಕ ಗ್ರಂಥಾಲಯಗಳು* | *http://www.ask-a-librarian.org.uk/* |
| 2 | *ಲೈಬ್ರರಿ ಆಫ್ ಕಾಂಗ್ರೆಸ್* | *http://www.loc.gov/rr/askalib/* |
| 3 | *ಇಂಟೆರ್ನೆಟ್ ಸಾರ್ವಜನಿಕ ಗ್ರಂಥಾಲಯ* | *http://www.ipl.org/div/askus/* |
| 4 | *ರಾಷ್ಟ್ರೀಯ ವಿಜ್ಞಾನದ ಡಿಜಿಟಲ್ ಗ್ರಂಥಾಲಯ* | *http://nsdl.org/* |
| 5 | ಅಮೇರಿಕಾ ಶಾಲಾ ಗ್ರಂಥಾಲಯಗಳು (*K-12 ವಿದ್ಯಾರ್ಥಿಗಳಿಗೆ*) | *http://www.ala.org/ICONN/AskKC.html* |
| 6 | *Florida ಗ್ರಂಥಾಲಯಗಳ Virtual ಪರಾಮರ್ಶನ ಸೇವೆ* | *http://www.askalibrarian.org/* |
| 7 | *New York ಸಾರ್ವಜನಿಕ ಗ್ರಂಥಾಲಯಗಳು* | *http://www.nypl.org/questions/* |
| 8 | *ASERL (The Association of Southeastern Research ಗ್ರಂಥಾಲಯಗಳು)* | *http://www.ask-a-librarian.org/* |
| 9 | *ಕ್ಯಾಲಿಫೋರ್ನಿಯ ಗ್ರಂಥಾಲಯಗಳು* | *http://www.asknow.org/* |
| 10 | *Finnish ಗ್ರಂಥಾಲಯಗಳು (Finland)* | *http://www.libraries.fi/en-GB/ask_librarian* |
| 11 | *CFPL (Cedar Falls ಸಾರ್ವಜನಿಕ ಗ್ರಂಥಾಲಯ)* | *http://www.iren.net/cfpl/forms/aal_form.html* |
| 12 | ಕ್ಯಾಲಿಫೋರ್ನಿಯ ವಿ.ವಿ.ದ ಸಂತ ಬಾರ್ಬರ *ಗ್ರಂಥಾಲಯಗಳು* | *http://www.library.ucsb.edu/* |

*ಕ್ಯಾಲಿಫೋರ್ನಿಯ* ವಿ.ವಿ.ದ ಸಂತ ಬಾರ್ಬರ (UCSB) ಗ್ರಂಥಾಲಯಗಳ 'Ask a Librarian' ನಾಲ್ಕು ವರ್ಗಗಳಲ್ಲಿ ಪ್ರಶ್ನೆಗೆ ಅನುವು ಮಾಡುತ್ತದೆ:– (i) Live online chat (ii) e-mail (iii) ವಿಷಯತಜ್ಞರ ಸಂಪರ್ಕ ಮತ್ತು (iv) ಖುದ್ದು ಭೇಟಿ. ಕೆಲವು ತಾಣಗಳು ಅನಾಮಧೇಯ ಪ್ರಶ್ನೆಗಳನ್ನೂ ಸ್ವೀಕರಿಸುತ್ತವೆ ಮತ್ತು Onlineನಲ್ಲಿ ಉತ್ತರಿಸಲಾಗದ್ದನ್ನು e-mail ಮೂಲಕ ಸಂಭಾಷಣೆಯ ಪೂರ್ಣಪಾಠ ಮತ್ತು ಸಂದರ್ಶಿಸಿದ ತಾಣಗಳ live links ಗಳೊಂದಿಗೆ ಕಳಿಸುತ್ತವೆ. Florida ರಾಜ್ಯದ ಶಾಲಾ, ಸಾರ್ವಜನಿಕ, ಶೈಕ್ಷಣಿಕ ಮತ್ತು ವಿಶಿಷ್ಟ ಗ್ರಂಥಾಲಯಗಳೆಲ್ಲವೂ ಸೇರಿ ನೆಡೆಸುವ Florida Virtual ಪರಾಮರ್ಶನ ಸೇವೆಯಲ್ಲಿ ಓದುಗರೆ ಹತ್ತಿರದ ಶಾಖೆಯೊಂದನ್ನು ಆಯ್ದುಕೊಂಡು, ಈ ಹಿಂದೆ ನೆಡೆಸಿರುವ ಪ್ರಶ್ನೋತ್ತರಗಳ archive ಪರಿಶೀಲಿಸಿ ಗ್ರಂಥಪಾಲಕರೊಬ್ಬರೊಂದಿಗೆ chat ಮಾಡುವ (ಅಥವ e-mail) ಮೂಲಕ ನೇರ ಪ್ರಶ್ನೆ ಕೇಳಬಹುದು. ಈ ತಾಣಗಳಲ್ಲಿ ಸಂಕ್ಷಿಪ್ತ ಹಾಗೂ ನಿಖರವಾದ ಪ್ರಶ್ನೆ ಕೇಳುವ ಪರಿಯನ್ನು ಉದಾಹರಣೆಗಳೊಂದಿಗೆ ವಿಷದಪಡಿಸಲಾಗಿದೆ. ಕೇಳುವವರ ಹೆಸರು ಮತ್ತು ವಿವರಗಳನ್ನು ಗೌಪ್ಯವಾಗಿಡುವ

ಆಶ್ವಾಸನೆ ಇದೆ. ಅಲ್ಲದೆ ಈ ತಾಣಗಳನ್ನು ತಲುಪಿದಾಗ ನಾವು ಅವುಗಳ online ಗ್ರಂಥಸೂಚಿ ಮತ್ತಿತರ ಮಾಹಿತಿಯನ್ನು ಪರಿಶೀಲಿಸಬಹುದಾಗಿದೆ.

ಈ ವಿಶಿಷ್ಟ ಮಾಹಿತಿ ಸೇವೆಯನ್ನು ಇಂಟರ್‌ನೆಟ್‌ನ ಸಂವಹನ ವೇಗ ಮತ್ತಿತರ ಗುಣಗಳನ್ನು ಪರಾಮರ್ಶನ ಗ್ರಂಥಪಾಲಕರ ಅನುಭವದ ಜೊತೆ ಬೆಸೆದು ಬೆಳಸಲಾಗಿದೆ. ನಾಲ್ಕು ಗೋಡೆಗಳ ಮಧ್ಯೆ ಇದ್ದ ಗ್ರಂಥಾಲಯಗಳ 'ಪರಾಮರ್ಶನ ಸೇವೆಯನ್ನು' ನೂರಾರು ಗ್ರಂಥಾಲಯಗಳ, ದತ್ತಾಂಶಗಳ, ತಜ್ಞರ ಮತ್ತು ಗ್ರಂಥಪಾಲಕರ ಜಾಲ ಸೃಷ್ಟಿಸಿ ಮತ್ತು ಸುಲಭ ಸಂಪರ್ಕ ಕಲ್ಪಿಸಿ ವಿಶ್ವಾದಾದ್ಯಂತ ಕೊಂಡೊಯ್ದು 24 ಘಂಟೆಗಳಲ್ಲಿ ಪೂರೈಸಲು ಇಂಟರ್‌ನೆಟ್‌ನಿಂದ ಸಾಧ್ಯವಾದುದರಿಂದ ಇದೊಂದು ಇಂಟರ್‌ನೆಟ್‌ನ ವಿಶಿಷ್ಟ ಸದ್ಬಳಕೆ. ಜನಪ್ರಿಯ ಇಂಟರ್‌ನೆಟ್ ಶೋಧ ಯಂತ್ರಗಳು ಸ್ವಯಂಚಾಲಿತ ಪ್ರಶ್ನೋತ್ತರ ಸೇವೆ ಒದಗಿಸುತ್ತವೆಯಾದರು, ಅದು ಒಂದು ಅಂದಾಜಿನ ಮೇಲೆ ಪ್ರಶ್ನೆಯ ಸೂಚಿ ಪದಗಳನ್ನು ಯಂತ್ರ ತಯಾರಿಸಿಟ್ಟಿರುವ ತಾಣಗಳ ಸಮಗ್ರ ಸೂಚಿಯೊಂದಿಗೆ ತಾಳೆ ಹಾಕಿ ಅಂತಹ ತಾಣಗಳನ್ನು ತೆಗೆದಿರಿಸುವುದರಿಂದ ಅಷ್ಟು ನೇರ ಮತ್ತು ನಿಖರ ಮಾಹಿತಿ ಅನ್ನಿಸುವುದಿಲ್ಲ (ಇವುಗಳ ಬಗ್ಗೆ ಮುಂದೆ ಪ್ರತ್ಯೇಕ ತಿಳಿಯೋಣ).

ಗ್ರಂಥಪಾಲಕ ವೃತ್ತಿಗೆ ಈ ಮಾಹಿತಿ ಸೇವೆ ಅಪಾರ ಗೌರವ ತಂದಿದೆಯಾದರೂ, ಭಾರತೀಯ ಗ್ರಂಥಪಾಲಕರು ಇದಕ್ಕೆ ಹೊರತು. ಅಂತಾಕ್ಷರಿ ಮತ್ತು quiz ಸಂಸ್ಕೃತಿಗಳಲ್ಲಿ ಮುಳುಗಿರುವ ನಾವು ನಮ್ಮ ನೆಲಕ್ಕೆ ಹತ್ತಿರವಾದ ಅನೇಕನೇಕ ಮಾಹಿತಿಗೂ ಹೊರದೇಶದ 'ಗ್ರಂಥಪಾಲಕರೊಬ್ಬರನ್ನು ಕೇಳ'ಬೇಕಾದುದು ದುರ್ದೈವ. ನಮ್ಮಲ್ಲಿ ತಜ್ಞರೂ ಇದ್ದಾರೆ, ತಂತ್ರಜ್ಞರೂ ಇದ್ದಾರೆ. ಆದರೂ ನಾವು ಪರಾವಲಂಭಿಗಳು. ನಮ್ಮ ದೇಶದ ಗ್ರಂಥಾಲಯಗಳನ್ನು ಸಾಲುಸಾಲಾಗಿ 'ಮಾಹಿತಿ ಕೇಂದ್ರ' ಗಳೆಂದು ಮರು ನಾಮಕರಣ ಮಾಡುತ್ತಿದ್ದೇವೆಯೆ ಹೊರೆತು ಇಂತಹ ಒಂದು ಮಾಹಿತಿ ಸೇವೆ ಒದಗಿಸುವ ಯೋಜನೆಯಿಲ್ಲ. ಬರೀ ಹೆಸರನ್ನು ಬದಲಾಯಿಸಿದರೆ ವೃತ್ತಿ ಘನತೆ ಗೌರವ ಹೆಚ್ಚುವುದೆ? ನಮ್ಮ ದೇಶದ ಇಂಟರ್‌ನೆಟ್ ತಾಣಗಳಿಂದ ಇಂತಹ ಮಾಹಿತಿ ಸೇವೆ ಸಾಧ್ಯವಾಗುವುದೆಂದು? ಇನ್ನು ಕನ್ನಡದಲ್ಲಿ ಇಂತಹ ಇಂಟರ್‌ನೆಟ್ ಸೇವೆ ನಿರೀಕ್ಷಿಸುವುದು ಬಹಳ ದೂರವೆ ಉಳಿಯಿತು.

**ತಗ್ಗಿದ ಮುದ್ರಿತ ಪರಾಮರ್ಶನ ಗ್ರಂಥಗಳ ಅವಶ್ಯಕತೆ:** ಇತ್ತಿಚಿನ ಪುಸ್ತಕಗಳ ಆಯ್ಕೆ ಮತ್ತು ಖರೀದಿಯ ನಿಯಮವಾಳಿಯ ಮಾರ್ಪಾಟಿನಂತೆ, ಸಾರ್ವಜನಿಕ ಗ್ರಂಥಾಲಯ ಇಲಾಖೆ ಕೊಳ್ಳುವ ಪುಸ್ತಕಗಳಲ್ಲಿ ಶೇ 10ರಷ್ಟು ಸಾಂದರ್ಭಿಕ ಮತ್ತು ಪರಾಮರ್ಶನ ಗ್ರಂಥಗಳಿರಬೇಕು. ಈ ಅನುಪಾತದ ನಿರ್ಧಾರಕ್ಕೆ ಆಧಾರ ತಿಳಿಯದು ಮತ್ತು ಸಾರ್ವಜನಿಕ ಗ್ರಂಥಾಲಯಗಳಲ್ಲಿ ಪರಾಮರ್ಶನ ಸೇವೆ ಖನಿಷ್ಟದ್ದಾಗಿದೆ. ಮೇಲಾಗಿ ಪರಾಮರ್ಶನ ಗ್ರಂಥಗಳು ಅತ್ಯಂತ ದುಬಾರಿಯಾದ್ದರಿಂದ ಶೇ 10ರಷ್ಟು ಪರಾಮರ್ಶನ ಗ್ರಂಥಗಳಿಗೆ ತಗಲುವ ವೆಚ್ಚ ಮಿಕ್ಕ ಶೇ 90ರಷ್ಟು ಸಾಧರಣ ಪುಸ್ತಕಗಳ ವೆಚ್ಚಕ್ಕೆ ಸಮನಾದರೂ ಆಶ್ಚರ್ಯವಿಲ್ಲ. ಪರಾಮರ್ಶನ ಗ್ರಂಥಗಳಲ್ಲಿನ ಮಾಹಿತಿ ಬಹು ಬೇಗ ಹಳತಾಗಿ ಅಪ್ರಸ್ತುತ (out-date) ವಾಗುತ್ತದೆ. ಗ್ರಂಥಾಲಯಗಳಲ್ಲಿ ಅವುಗಳ ಬಳಕೆಯೂ ತೀರ ಕಡಿಮೆ. ಈ ಹಿಂದೆ ಚಾಲಾಕಿ ಪ್ರಕಾಶಕರು ಕಳಪೆ ದರ್ಜೆಯ ಹಿಂದಿ ಮತ್ತು ಇಂಗ್ಲೀಷ್ ವಿಶ್ವಕೋಶಗಳನ್ನು ಮತ್ತು ಅವುಗಳ ಕೆಟ್ಟ ಸಗಟು ಖರಿದಿಗಾಗಿಯೆ ಭಾಷಾಂತರಿಸಿದ ಆವೃತ್ತಿಗಳನ್ನ ದುಬಾರಿ ಬೆಲೆ ಇಟ್ಟು ಗ್ರಂಥಾಲಯಗಳಿಗೆ ತುಂಬಿದ ಉದಾಹರಣೆಗಳಿವೆ. ನೂರಾರು ಉತ್ಕೃಷ್ಟ ಪರಾಮರ್ಶನ ಗ್ರಂಥಗಳು ಇಂಟರ್‌ನೆಟ್‌ನಲ್ಲಿ ಪುಕ್ಕಟೆ ಲಭ್ಯವಿವೆ. ಉದಾಹರಣೆಗೆ Encyclopedia Britanica, World fact book, Nation-by-nation almanac, World reference, ಇತ್ಯಾದಿ. ಸಂತಸದ ವಿಷಯವೆಂದರೆ ಕನ್ನಡ ವಿಕಿಪೀಡಿಯ ಎಂಬ ಮುಕ್ತ ವಿಶ್ವಕೋಶ ಕೂಡ ಸುಮಾರು 1000 ಲೇಖನಗಳನ್ನು ಹೊಂದಿದ್ದು, ಇಂಟರ್‌ನೆಟ್‌ನಲ್ಲಿ ಪುಕ್ಕಟೆ ಲಭ್ಯವಿದೆ. ಇದು ಮತ್ತು ಇದರ ಜೊತೆಗೆ ಕನ್ನಡ ವಿಕ್ಷನರಿ (ಮುಕ್ತ ಶಬ್ದಕೋಶ) ನಿತ್ಯ ಬೆಳೆಯುತ್ತಲಿವೆ. ದಿನ ನಿತ್ಯ ಮುಖಾಮುಖಿ, ದೂರವಾಣಿ ಅಥವ ಇಂಟರ್‌ನೆಟ್ ಮೂಲಕ ಪರಾಮರ್ಶನ ಸೇವೆ ಕೊಡದಿರುವ ನಮ್ಮ ಸಾರ್ವಜನಿಕ ಮತ್ತು ಶಾಲಾ ಗ್ರಂಥಾಲಯಗಳು ಪರಾಮರ್ಶನ ಗ್ರಂಥಗಳ ಖರೀದಿಯನ್ನು ನಿಲ್ಲಿಸಿ ಅಥವ ಅತ್ಯಂತ ಖನಿಷ್ಟಗೊಳಿಸಿ ಆ ಹಣವನ್ನು ಗ್ರಂಥಾಲಯಗಳಲ್ಲಿ ಇಂಟರ್‌ನೆಟ್ ಸೌಲಭ್ಯ ಕಲ್ಪಿಸಲು ಬಳಸಿದರೆ ಒಳಿತು. ಕೊಳ್ಳಲೇ ಬೇಕಾದ ಪರಾಮರ್ಶನ ಗ್ರಂಥಗಳ ಒಂದೇ ಪ್ರತಿಯನ್ನು ಒಂದು ಶಾಖೆಯಲ್ಲಿ ಮಾತ್ರ ಕೊಂಡು ಸೇವೆಯನ್ನು ದೂರವಾಣಿ ಅಥವ e-mail ಮೂಲಕ ಎಲ್ಲಾ ಶಾಖೆಗಳಿಗೂ ವಿಸ್ತರಿಸಬಹುದು. ಯತೇಚ್ಛವಾಗಿ ಇಂಟರ್‌ನೆಟ್ ಪರಾಮರ್ಶನ ಗ್ರಂಥಗಳು ಮತ್ತು 'ಗ್ರಂಥಪಾಲಕರೊಬ್ಬರನ್ನು ಕೇಳಿ' ಬಳಸುವ ಹವ್ಯಾಸವನ್ನು ಓದುಗರಲ್ಲಿ ಬೆಳೆಸಿ, ಜನಪ್ರಿಯಗೊಳಿಸುವುದರ ಜೊತೆಗೆ ಕಂಪ್ಯೂಟರ್ ಅಕ್ಷರತೆ ವೃದ್ಧಿಗೆ, ಇ–ಆಡಳಿತ ಮಾಹಿತಿ ಪ್ರಸಾರಕ್ಕೆ ಮತ್ತು ಇತ್ತಿಚೆಗೆ ಆವಿಷ್ಕಾರಗೊಳ್ಳುತ್ತಿರುವ 'ವಿಜ್ಞಾನ ಕೇಂದ್ರ'ಗಳ ಮಾಹಿತಿ ಪ್ರಸಾರಕ್ಕೆ ಒತ್ತಾಸೆಯಾಗಬಹುದಾಗಿದೆ. ಗಣಕೀಕರಣವಾಗದ ಗ್ರಂಥಾಲಯಗಳೂ ಈ ರೀತಿ ಇಂಟರ್‌ನೆಟ್ ಮೂಲಕ ಶ್ರೀಸಾಮನ್ಯನಿಗೆ ಮಾಹಿತಿ ದೊರಕಿಸಿ ಕೊಡುವಲ್ಲಿ ಸಕ್ರಿಯ ಪಾತ್ರ ವಹಿಸಬಹುದಾಗಿದೆ.

ಕೊನೆಯದಾಗಿ, ಕ.ಸಾ.ಪ, ಹಾಗೂ ವಿ.ವಿ. ಗಳ ಪ್ರಸಾರಾಂಗಗಳು ಮತ್ತಿತ್ತರ ಸಂಸ್ಥೆಗಳು ತುಂಬ ಉತ್ಸಾಹದಿಂದ ಕನ್ನಡ ವಿಶ್ವಕೋಶ, ನಿಘಂಟು/ಪದಕೋಶ ಇತ್ಯಾದಿ ಮುದ್ರಿತ ಪರಾಮರ್ಶನ ಗ್ರಂಥಗಳನ್ನು CD ರೂಪದಲ್ಲಿ ತರುವ ತಯಾರಿಯಲ್ಲಿವೆ. ಇದು 10-15 ವರ್ಷಗಳ ಹಿಂದೆಯೆ ಆಗಬೇಕಾಗಿದ್ದ ಕೆಲಸ. ಇಂದು ಇಂತಹ ಪರಾಮರ್ಶನ ಗ್ರಂಥಗಳನ್ನು online ರೂಪದಲ್ಲಿ ಇಂಟರ್‌ನೆಟ್‌ನಲ್ಲಿ ಪುಕ್ಕಟೆ ಅಥವ subscription ಆಧಾರದ ಮೇಲೆ ದೊರೆಕಿಸಬೇಕಾದ ಅವಶ್ಯಕತೆ ಇದೆ. ಹಾಗೆಯೆ ತಮ್ಮಲ್ಲಿರುವ ಮಾಹಿತಿಯನ್ನು

ಮುಕ್ತ ವಿಶ್ವಕೋಶ, ಪದಕೋಶ, ಇತ್ಯಾದಿಗಳಿಗೆ ಸೇರಿಸುವುದರಿಂದ ವಿಶ್ವಾದಾದ್ಯಂತ ಲೇಖನಗಳ ವ್ಯಾಪಕ ಉಪಯೋಗ ಅಗುವುದಲ್ಲದೆ CD ಪ್ರಕಟಣೆ, ಪ್ರಚಾರ ಮತ್ತು ವಿತರಣೆಯ ವೆಚ್ಚವನ್ನು ಉಳಿಸಬಹುದಾಗಿದೆ. ಪ್ರತಿ ಬಾರಿ ಒಂದು ಪದದ ಅರ್ಥ ತಿಳಿಯಲು ನೂರಾರು CDಗಳ ಸಂಗ್ರಹದಿಂದ ಶಬ್ದಕೋಶದ CD ಯನ್ನು ಹುಡುಕಿ ತೆಗೆದು drive ನಲ್ಲಿ ಇಟ್ಟು, 'ನುಡಿ' ತಂತ್ರಾಂಶವನ್ನು ಆರಂಭಿಸಿ, ಅರ್ಥ ಹುಡುಕುವುದು ಓದುಗರ ತಾಳ್ಮೆಯ ಪರೀಕ್ಷೆಯಾದೀತು. ಈಗಾಗಲೆ ಇರುವ CDಗಳ (ಉದಾ: telephone directory) ಬಳಕೆ ಹೇಗೆ ಆಗುತ್ತಿದೆ ಎನ್ನುವುದನ್ನು ಗಮನಿಸುವುದು ಸೂಕ್ತ. ಮೇಲಾಗಿ ಮುದ್ರಿತ ಪದಕೋಶ/ವಿಶ್ವಕೋಶಗಳಲ್ಲಿ ದೊರೆಯದ ಹೆಚ್ಚಿನ ಅನುಕೂಲ (ಪದ ಉಚ್ಚಾರಣೆಯ ಶಬ್ದರೂಪ, animation, ಇತ್ಯಾದಿ) ಈ CD ಗಳಲ್ಲಿ ಅಳವಡಿಸಿಯೂ ಇಲ್ಲ. ಮನೆಗಳಲ್ಲಿ ಕೂಡ ಇಂದು ಕಂಪ್ಯೂಟರ್ ಹೊಂದಿರುವವರು ಇಂಟರ್‌ನೆಟ್ ಪಡೆಯುವುದು ಅಷ್ಟೇನು ದುಬಾರಿಯೂ ಅಲ್ಲ ಮತ್ತು ಇತರ ಉದ್ದೇಶಗಳಿಗಾಗಿ ಇಂಟರ್‌ನೆಟ್ (cable TV ಗಳಂತೆ) ಮನೆಗಳಿಗೆ ಬಂದಿದೆ. ಇಂತಹ CDಗಳನ್ನು ಹೊರತರುವ ಯೋಜನೆಗಳನ್ನು ರೂಪಿಸುತ್ತಿರುವ ತಜ್ಞರು ಮತ್ತು ಮಧ್ಯವರ್ತಿಗಳು ದಯಮಾಡಿ ಗುರುನೆಟ್ ಅವರ Answers.com ನ್ನು ಬಳಸಿ ಕಂಪ್ಯುಟರ್ ಮೇಲೆ ಯಾವುದೇ ಕೆಲಸ ಮಾಡುವಾಗಲೂ ಬೇಕೆನಿಸಿದ ಪದದ ಮೇಲೆ Alt ಕೀಲಿ ಒತ್ತಿ ಹಿಡಿದು ಕ್ಲಿಕ್ಕಿಸಿದ ಕೂಡಲೆ ದೊರೆಯುವ ಶಬ್ದಕೋಶ/ವಿಶ್ವಕೋಶದ ಮಾಹಿತಿಯನ್ನು ಮತ್ತು WordNet(2.0) ಪದಕೋಶದ ಮಾಹಿತಿಯನ್ನು ಗಮನಿಸಬೇಕು. ಇನ್ನಾದರೂ ನಾವು ಕನ್ನಡದಲ್ಲಿ 'ಗ್ರಂಥಪಾಲಕರೊಬ್ಬರನ್ನು ಕೇಳಿ' ಮತ್ತು ವಿಕಿಪೀಡಿಯದಂತಹ ಇಂಟರ್‌ನೆಟ್ ಸೇವೆಗಳನ್ನು ದೊರಕಿಸಿಕೊಡುವತ್ತ ಗಮನಹರಿಸಬೇಕು.

---

* *ಕನ್ನಡ ಪ್ರಭ*, ಏಪ್ರಿಲ್ ೨೫, ೨೦೦೫, ಪು. ೪.

## ಲೇಕಖರ ವಿವರ



ಡಾ. ಎಂ ಎಸ್ ಶ್ರೀಧರ್‌ರವರು ಗಣಿತ ಹಾಗೂ ಬಿಸಿನೆಸ್ ಮ್ಯಾನೇಜ್‌ಮೆಂಟ್ ಎರಡೂ ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಅವರು ಕಳೆದ ೩೭ ವರ್ಷಗಳಿಂದ ಗ್ರಂಥಾಲಯ ಕ್ಷೇತ್ರದಲ್ಲಿದ್ದು, ೧೯೭೮ ರಿಂದ ಇಸ್ರೋ ಉಪಗ್ರಹ ಕೇಂದ್ರದ ಗ್ರಂಥಾಲಯ ಮತ್ತು ಪ್ರಲೇಖನ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೂ ಮುನ್ನ ಎನ್ ಎ ಎಲ್, ಐ ಐ ಎಂ (ಬೆಂಗಳೂರು) ಹಾಗೂ ಮೈಸೂರು ವಿಶ್ವ ವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವವಿದೆ.

ಡಾ. ಶ್ರೀಧರ್ ಅವರು ೪ ಪುಸ್ತಕಗಳು ಮತ್ತು ೮೮ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ, ಹಾಗೂ ವಿವಿಧ ಪುಸ್ತಕಗಳಿಗಾಗಿ ೫ ಪಠ್ಯಗಳನ್ನೂ ಬರೆದಿದ್ದಾರೆ. ಇವರು ಮುಕ್ತ ವಿಶ್ವವಿದ್ಯಾನಿಲಯಗಳ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ೧೯ ಪಠ್ಯ ಸಾಮಾಗ್ರಿಯನ್ನು ರಚಿಸಿದ್ದಾರೆ. ಇದಲ್ಲದೆ ಸುಮಾರು ೪೫ ಲೇಖನ/ ಪ್ರವಚನಗಳನ್ನು ವಿವಿಧ ಸಮ್ಮೇಳನ / ವಿಚಾರ ಸಂಕಿರಣಗಳಲ್ಲಿ ಮಂಡಿಸಿದ್ದಾರೆ.